ವೇದಾಂತ

ಪರಮಾರ್ಥಸಾರ



ಮೈಸೂರು ವೇ|| ಶಿವರಾಮಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು

ಪ್ರಕಾಶಕರು:
ಗೋಪಾಲಶೆಟ್ಟಿ ಸನ್ಸ್
ಶ್ರೀ ಶಂಕರಾನಂದ ಬುಕ್ ಡಿಪೋ
" ಶಾಂತಿನಿವಾಸ್ "
೭ ನೇ ಕ್ರಾಸ್, ಹೊಸಕೇರಿ, ಮೈಸೂರು-೪

 ೧೯೬೮ [ಬೆಲೆ : ೫೦ ಪೈ

ಪರಮಾರ್ಥಸಾರ

ಮೈಸೂರು ವೇ॥ ಶಿವರಾಮಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು

ಪ್ರಕಾಶಕರು :
ಎಂ. ಗೋಪಾಲಶೆಟ್ಟಿ ಸನ್ಸ್
ಶ್ರೀ ಶಂಕರಾನಂದ ಬುಕ್ ಡಿಪೊ
" ಶಾಂತಿ ನಿವಾಸ್ "
೬ನೇ ಕ್ರಾಸ್, ಹೊಸಕೇರಿ, ಮೈಸೂರು-೪

ಹೊಸ ಮುದ್ರಣ : ಡಿಸೆಂಬರ್, ೧೯೬೭

ಬೆಲೆ : ೫೦ ಪೈಸೆ

ಮುದ್ರಣ :
ಶ್ರೀ ನಂದಿಕೇಶ್ವರ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

॥ ಶುಭಮಸ್ತು ॥

ಪರಮಾರ್ಥಸಾರ

॥ ದ್ವಿಪದೆ ॥

ಜಯತು ಗುರು ಶಂಕರಾನಂದ ಯೋಗೀಂದ್ರ ।
ಜಯತು ನಿಗಮಾಗಮಾಮೃತ ಸಿಂಧು ಚಂದ್ರ ॥ ೧ ॥
ನಿರುಪಮಿತ ನಿಷ್ಕಾಮ ಸುಖಪೂರ್ಣಧಾಮ ।
ಪರಮ ಮಹಿಮಾರಾಮ ಪರಮಾರ್ಥ ಸೀಮ ॥ ೨ ॥
ಗುರುಕುಲೇಶ್ವರ ನಿನ್ನ ಚರಣ ಕೃಪೆಯಿಂದ ।
ಪರಮ ತತ್ವವ ಪೇಳುವೆನು ಮೋದದಿಂದ ॥ ೩ ॥
ವೇದವೇದಾಂತ ಸಾರವನೆಲ್ಲ ತೋಡಿ ।
ಸಾಧಕರಿಗ್ಹಿತ ಮಾಗುವಂತೆ ರಸಗೂಡಿ ॥ ೪ ॥
ಪೇಳುವೆನು ಭವತಾರಕ ಪ್ರಬಂಧವನು ।
ಲಾಲಿಪುದು ಸಜ್ಜನರು ತೊರೆದು ದೋಷವನು ॥ ೫ ॥
ಪರಮಾರ್ಥಸಾರವೆಂದಿದಕೆ ನಾಮವನು ।
ಪರಮತತ್ವಜ್ಞರಿಡುವಂತೆ ಪೇಳುವೆನು ॥ ೬ ॥
ಚಿನ್ಮಯಾನಂದ ಪರಿಪೂರ್ಣ ಪರಶಿವನು ।
ತನ್ನೊಳಗೆ ಬೆಳಗುವಂದದಲಿ ಪೇಳುವೆನು ॥ ೭ ॥
ಭುವನದೊಳಿದರರ್ಥವನು ತಿಳಿದ ನರನು ।
ಶಿವನಾಗಿ ಮೂರುಮೂರ್ತಿಗಳ ಮೀರುವನು ॥ ೮ ॥

ಧರೆಯೊಳಿದನುಸುರುವದು ಗುರುಸೇವಕನಿಗೆ ।
ಮರೆತಿದನು ಪೇಳಬಾರದು ಕರ್ಮಠನಿಗೆ ॥ ೯ ॥

ಅಜ್ಞಾನಿಗಳಿಗೆ ವಿಷದಂತೆ ತೋರುವದು ।
ಸುಜ್ಞಾನಿಗಿದು ಸುಧಾಸಾರವಾಗಿಹುದು ॥ ೧೦ ॥
ಭಾವಿಸುತ ಲಿದರರ್ಥವನು ಚಿತ್ತದೊಳಗೆ ।
ಸೇವಿಪುದು ತಾವಿದನು ಬಹು ಗೋಪ್ಯದೊಳಗೆ ॥ ೧೧ ॥

ನಿರ್ಮಲಾನಂದ ನಾಮಕನೋರ್ವಮುನಿಯು ।
ಕರ್ಮವಿಲ್ಲದ ಧರ್ಮರಾಜ್ಯಕವದೊರೆಯು ॥ ೧೨ ॥
ಆಧೀರನರ್ಧಾಂಗಿ ಶೀಲೆಯೆಂಬುವಳು ।
ಶೋಧಿಸಿದ ಕನಕಲತೆಯಂತೆ ಬಳುಕುವಳು ॥ ೧೩ ॥
ನಿಜಕಾಂತನೊಳಗಿರುವ ನಿಜಸುಖವ ನೋಡಿ ।
ಭುಜಿಸಬೇಕಿದನೆನುತ ಮನದೊಳಗೆ ಮೂಡಿ ॥ ೧೪ ॥

ಅವಿರಳಾನಂದಮಯ ಭಾವಂಗಳಿಂದ ।
ವಿವಿಧೋಪಚಾರರಹಿತ ನಡೆನುಡಿಗಳಿಂದ ॥ ೧೫ ॥
ಮೀರಿಬಹ ಲಾವಣ್ಯ ಘನರಸದ ಕೋಡಿ ।
ಸೋರುತಿರುವಾನಂದಭಾಷ್ಪದೊಡಗೂಡಿ ॥ ೧೬ ॥
ನೀರೆ ಮುನಿವರನ ಸೇವಿಸುತ ಮುದದಿಂದ ।
ತೋರಿದಳು ಭಕ್ತಿಯನು ಬಹು ದೈನ್ಯದಿಂದ ॥ ೧೭ ॥
ಪರಮಪಾವನೆ ಶೀಲೆ ಕಡುಧೈರ್ಯವಂತೆ ।
ತೊರೆದಳಿಹಪರಬಂಧುಗಳನು ಕಸದಂತೆ ॥ ೧೮ ॥
ಒಂದುದಿನ ಹರುಷದಿಂದೇಕಾಂತದೊಳಗೆ ।
ಸಂದುತೋರಲು ಬೆರದು ನಿಜಕಾಂತನೊಳಗೆ ॥ ೧೯ ॥
ತರಳಾಕ್ಷಿ ಬೆಸಗೊಂಡಳಿಂತು ಮುನಿಪತಿಯ ।
ಪರಮಾರ್ಥ ತತ್ವದೊಳಗಿರುವ ಸಂಗತಿಯ ॥ ೨೦ ॥
ಎಲೆ ದೇವ ದೇವ ಸದ್ಗುರು ಸಾರ್ವಭೌಮ ।
ಸಲ್ಲಲಿತ ಸುಖಧಾಮ ಸುಗುಣಾಭಿರಾಮ ॥ ೨೧ ॥

ಮುನ್ನಮಾಡಿದ ಸುಕೃತ ಫಲಿಸಿಬರಲಿನ್ನ ।
ನಿನ್ನ ಪಾದಾಬ್ಜಗಳ ಪಿಡಿದೆ ಸಂಪನ್ನ ॥ ೨೨ ॥

ದೇವ ತನುವಿದು ನಿನ್ನ ಪಾದವಶವಾಯ್ತು ।
ಸೇವಕಳ ಭಿನ್ನಪವ ಕೇಳಬೇಕಾಯ್ತು ॥ ೨೩ ॥

ಹೃದಯದೊಳು ಸೇರಿತ್ತೈ ಎನಗೊಂದು ರೋಗ ।
ಸದಯ ನೀನಿದನು ಪರಿಹರಿಸಬೇಕೀಗ ॥ ೨೪ ॥

ಪೇಳಲಾರೆನು ಪೇಳದಿರಲಾರೆ ದೇವ ।
ಪೇಳದಿರ್ದೊಡೆ ಸುಮ್ಮನಿರದು ಒಳಭಾವ ॥ ೨೫ ॥

ತನುವಿನೊಳು ತನುವುಜನಿಸುವ ಚಿತ್ರವೆಂತು ।
ಘನವಾದ ಚೈತನ್ಯವದಕೆಲ್ಲಿ ಬಂತು ॥ ೨೬ ॥

ಪುಟ್ಟತಾಬೆಳದು ದಿನದಿನಕೆ ಬಲಬಂದು ।
ಕಷ್ಟಸುಖಗಳಹೊಂದಿ ತಿರುಗಿ ತಾನೊಂದು ॥ ೨೭ ॥

ಕೆಲಕಾಲ ಯವ್ವನಾರಣ್ಯದೊಳು ನಿಂದು ।
ಕಳೆತಪ್ಪಿ ತುದಿಗೆ ಮಣ್ಣಾಗುವದು ಬೆಂದು ॥ ೨೮ ॥

ತಿಳಿದುನೋಡಿದೊಡಿದರ ಸೌಂದರ್ಯದಂದ ।
ಮಲಮೂತ್ರ ಮಾಂಸ ರೇತೋರುಧಿರ ಬೃಂದ ॥ ೨೯ ॥

ಇದರ ರೂಪವನು ನೋಡಲೆನಗೆ ಭಯವಾಯ್ತು ।
ಇದನೊಡನೆ ಸಂಗವೆನಗೇತರಿಂದಾಯ್ತು ॥ ೩೦ ॥

ಇದನಾವತೆರದಿಂದ ನಾ ಕಳೆಯಬೇಕು ।
ಅದನೀಗ ಕೃಪೆಮಾಡಿ ನೀತೋರಬೇಕು ॥ ೩೧ ॥

ಗುರುಕುಲೇಶ್ವರ ನಾನು ಪೆರತೊಂದಕಾಣೆ ।
ಶಿರವನಿಮ್ಮಡಿಗೆ ನೀಡುವದರೊಳು ಜಾಣೆ ॥ ೩೨ ॥

ಪಾರವಿಲ್ಲದ ಪರಮಸುಖವೆಂಬುದೆಲ್ಲಿ ।
ತೋರಬೇಕೆನುತ ಬಿದ್ದಳು ಪಾದದಲ್ಲಿ ॥ ೩೩ ॥

ಆ ಮುನೀಂದ್ರನು ನೋಡಿ ಸತಿಗತಿಯನೆಲ್ಲ ।
ಪ್ರೇಮರಸಭರಿತವಾಯಿತು ಭಾವವೆಲ್ಲ ॥ ೩೪ ॥

ಸೋರುವಾನಂದಮಯ ಭಾಷ್ಪಂಗಳಿಂದ ।
ನೀರೆಯನು ಪಿಡಿದೆತ್ತಿದನು ಮೋದದಿಂದ ॥ ೩೫ ॥

ಒಳಗಡಗದುಕ್ಕಿಬರುವಾನಂದದಿಂದ ।
ಬಳಿಕ ನಸುನಗುತ ಮುನಿನಾಥನಿಂತೆಂದ ॥ ೩೬ ॥

ರಾಕೇಂದುಮುಖಿ ನಿನ್ನ ಬಾಲತ್ವವೆಲ್ಲಿ ।
ನೀ ಕೇಳುವೀ ನಿರಾಕಾರ ಪದವೆಲ್ಲಿ ॥ ೩೭ ॥

ಯಾವ ಜನ್ಮದ ಸುಕೃತಫಲವಿದೆಲೆ ಕಾಂತೆ ।
ಭಾವದೊಳು ಬೆಳಗಿತೀ ಪರಮಾರ್ಥಚಿಂತೆ ॥ ೩೮ ॥

ಜಲಜಾಯತಾಕ್ಷಿ ನೀ ಬಹು ಪುಣ್ಯವತಿಯು ।
ನೆಲೆಯಾಯ್ತು ನಿನ್ನೊಳಗೆ ಪರಮಾರ್ಥಗತಿಯು ॥ ೩೯ ॥

ಅದರಿಂದ ನಿನ್ನ ಕುಲವೆಲ್ಲ ಪಾವನವು ।
ಸುದತಿ ಕೇಳಿದು ಲೋಕದೊಳಗೆ ದುರ್ಲಭವು ॥ ೪೦ ॥

ಸ್ವರ್ಣಾಂಗಿ ನೀ ಕೇಳು ಈ ತತ್ವದಿಂದ ।
ನಿರ್ನಾಮವಾಗುವದು ದುಃಖ ಬುಡದಿಂದ ॥ ೪೧ ॥

ಬಿಡು ಭಯವ ಫಲಿಸಿಹುದು ಬಹು ಪುಣ್ಯಯೋಗ ।
ಕೊಡುವೆ ಸಂಜೀವಿನಿಯ ಭವರೋಗಕೀಗ ॥ ೪೨ ॥

ಎಲೆ ದೇವಿ ಶಿವನ ತೋರುವೆನೀಗ ನಾನು ।
ಕಳೆದುಳುಮೆಯನು ನೋಡುತಿರಬೇಕು ನೀನು ॥ ೪೩ ॥

ಪರಮಾರ್ಥದೊಳು ಪದಾರ್ಥಂಗಳೆರಡಿಹವು ।
ಪರಿಕಿಸಲ್ಕವರೊಳಗೆ ಇವು ಎಲ್ಲ ಕೂಡಿಹವು ॥ ೪೪ ॥

ಅವನು ದೃಕ್ ದೃಶ್ಯವೆಂಬುವರು ಯೋಗಿಗಳು
ಅವನರಿಯೆ ಸಿದ್ಧಿಪುದು ಸಕಲ ಭೋಗಗಳು ॥ ೪೫ ॥

ವಿವರಿಸಿಯೆ ಪೇಳ್ವೆ ನೀ ವಸ್ತುಗಳ ನಿಜವ
ಅವಿಕಾರದೊಳಗೆ ನಿಲ್ಲಿಸು ನಿನ್ನ ಮನವ ॥ ೪೬ ॥

ಮಂದುತೆರನಿರದೆ ನಾನಾ ವಿಕಾರವನು
ಹೊಂದಿ ರೂಪಾಗಿ ತೋರುತ ನಾಮುಗಳನು ॥ ೪೭ ॥

ಧರಿಸಿ ತಾನಾದ್ಯಂತದೊಳಗಿಲ್ಲವೆನಿಸಿ
ಸುರಸಿದ್ಧಲೋಕಂಗಳಾಗಿ ಪರಿಣಮಿಸಿ ॥ ೪೮ ॥

ಸಚ್ಚಿದಾನಂದಗಳ ಮುಸುಕಿರುವದೊಂದು
ನಿಶ್ಚೈಸು ನೀರೆ ನೀನಿದ ದೃಶ್ಯವೆಂದು ॥ ೪೯ ॥

ದೃಶ್ಯದೊಳು ತಾ ಸೇರದದಕನ್ಯವಾಗಿ ।
ದೃಶ್ಯವನು ಬೆಳಗಿಸುವ ಚಿತ್‌ಜ್ಯೋತಿಯಾಗಿ ॥ ೫೦ ॥

ದೃಶ್ಯದೊಳಗಿಹ ರೂಪು ನಾಮಾದಿಗಳನು ।
ನಶ್ವರದ ನಾನಾ ವಿಕಾರ ಜಾಲವನು ॥ ೫೧ ॥

ಮೀರಿ ಬೆಳಗುವದೊಂದು ನಿಜಸಾಕ್ಷಿಯಾಗಿ
ನೀರೆ ನೀ ತಿಳಿಯದನು ದೃಕ್ಕೆಂಬದಾಗಿ ॥ ೫೨ ॥

ದೃಕ್ಕಿನೊಳು ಕಲ್ಪಿತಗಳೀ ದೃಶ್ಯವೆಲ್ಲ ।
ದೃಕ್ಕಿನೊಳಗಡಗಿ ಕೆಡುತಿಹವು ತುದಿಗೆಲ್ಲ ॥ ೫೩ ॥

ದೃಕ್ ದೃಶ್ಯಗಳ ಕೂಟ ಸಂಸಾರವಾಯ್ತು ।
ದೃಕ್ ದೃಶ್ಯಗಳ ವಿಭಾಗವೆ ಮೋಕ್ಷವಾಯ್ತು ॥ ೫೪ ॥

ತೋರುವೆನು ದೃಕ್ ದೃಶ್ಯ ಭೇದಗಳ ನಿನಗೆ ।
ನೀರೆ ನೀ ಮನವ ನಿಲ್ಲಿಸು ದೃಕ್ಕಿನೊಳಗೆ ॥ ೫೫ ॥

ವಿಶ್ವದೊಳು ನೀಲರಕ್ತಶ್ವೇತದಿಂದ ।
ಹ್ರಸ್ವ ದೀರ್ಘ ಸ್ಥೂಲ ವಕ್ರಗತಿಯಿಂದ ॥ ೫೬ ॥

ತೋರಿ ಕೆಡುವೀ ವಿಚಿತ್ರದ ರೂಪವೆಲ್ಲ ।
ನೀರಜಾಕ್ಷಿಯೆ ನೋಡು ದೃಶ್ಯವಹುದೆಲ್ಲ ॥ ೫೭ ॥

ಆ ರೂಪಿನೊಳಗಿರುವ ವಿವಿಧ ಭೇದವನು
ತೋರಿ ಕೆಡುತಿರುವದರ ನಿಜಧರ್ಮಗಳನು ॥ ೫೮ ॥

ಏಕಕಾಲದಲಿ ತಾ ಬೆಳಗಿಸುವದಾಗಿ ।
ಏಕರೂಪವತಾಳಿ ಅದಕೆ ಬೇರಾಗಿ ॥ ೫೯ ॥

ರೂಪಿನಂತೆ ವಿಕಾರ ತಾ ಹೊಂದದಾಗಿ ।
ರೂಪು ಕೆಟ್ಟರು ತಾನು ಕೆಡದುಳುಮೆಯಾಗಿ ॥ ೬೦ ॥

ಬೆಳಗುತಿಹುದದಾಗಿ ನಿರ್ಮಲ ಭಾವದಲ್ಲಿ ।
ತಿಳಿಯೆ ಲೋಚನವು ದೃಕ್ಕೆನಿಸುತಿಹುದಿಲ್ಲಿ ॥ ೬೧ ॥

ಇದರಂತೆ ಶಬ್ದಾದಿ ವಿಷಯಂಗಳೆಲ್ಲ ।
ಚದುರೆ ದೃಶ್ಯಂಗಳಾಗಿಹವು ನೋಡೆಲ್ಲ ॥ ೬೨ ॥
ಧ್ವನಿಯ ಭೇದಗಳೆಲ್ಲ ದೃಶ್ಯವಾಗುವದು ।
ಗಣಿಸಲದಕೀ ಶ್ರೋತ್ರ ದೃಕ್ಕಾಗುತಿಹುದು ॥ ೬೩ ॥

ಶೀತ ಉಷ್ಣ ಸ್ಪರ್ಶ ದೃಶ್ಯವಾಗುವದು ।
ಈ ತ್ವಗಿಂದ್ರಿಯವದಕೆ ದೃಕ್ಕಾಗುತಿಹುದು ॥ ೬೪ ॥
ಮಧುರಾದಿ ವಿವಿಧ ರಸ ದೃಶ್ಯವಾಗುವದು ।
ಇದನರಿವ ರಸನೆಯೇ ದೃಕ್ಕಾಗುತಿಹುದು ॥ ೬೫ ॥
ಗಂಧ ಭೇದಗಳೆಲ್ಲ ದೃಶ್ಯವಾಗುವದು
ಇಂದುಮುಖಿ ಇದಕೆ ನಾಸಿಕವು ದೃಕ್ಕಹುದು ॥ ೬೬ ॥

ಇಂತು ಈ ಶಬ್ದಾದಿ ವಿಷಯಭೇದಗಳು ।
ಚಿಂತಿಸುತ ನೀನೋಡಿವೆಲ್ಲ ದೃಶ್ಯಗಳು ॥ ೬೭ ॥
ಇವನೆಲ್ಲ ಬೆಳಗಿಸುವ ಇಂದ್ರಿಯಗಳೆಲ್ಲ ।
ಇವಕೆ ಬೇರಾಗಿ ದೃಕ್ಕೆನಿಸುತಿಹವೆಲ್ಲ ॥ ೬೮ ॥
ಈ ಶಬ್ದ ಮೊದಲಾದ ವಿಷಯಗಳಿಗೆಲ್ಲ ।
ಆಶ್ರಯವೆನಿಸುವಿವೀ ಭೂತಂಗಳೆಲ್ಲ ॥ ೬೯ ॥

ವಿವರಿಸಲು ಇದರಂತೆ ದೃಶ್ಯವಾಗಿಹವು ।
ಇವಕೆ ದೃಕ್ಕಾಗುತಿಂದ್ರಿಯಗಳಿರುತಿಹವು ॥ ೭೦ ॥
ದೃಶ್ಯ ಧರ್ಮಗಳೊಂದು ದೃಕ್ಕಿನೊಳಗಿಲ್ಲ ।
ದೃಶ್ಯದೊಳು ದೃಕ್ಕು ಸಂಬಂಧಿಸುವದಿಲ್ಲ ॥ ೭೧ ॥
ಉಳಿಯದಂತೀ ವಿಷಯಗಳನು ಕಳೆದಂತೆ ।
ಕಳೆಯಬೇಕಿಂದ್ರಿಯಂಗಳನು ಅದರಂತೆ ॥ ೭೨ ॥

ಇದರಂತೆ ನೋಡಲೀ ಇಂದ್ರಿಯಗಳೆಲ್ಲ ।
ಚದುರೆ ದೃಶ್ಯಂಗಳಾಗುವವು ಕಡೆಗೆಲ್ಲ ॥ ೭೩ ॥

ಆಂಧ್ಯ ಮಾಂದ್ಯ ಪಟುತ್ವ ಮುಖಧರ್ಮಗಳನು ।
ಹೊಂದಿತಾ ನಾನಾ ವಿಕಾರ ಜಾಲವನು ॥ ೨೪ ॥

ಭಿನ್ನಿಸುವ ನಿಂದ್ರಿಯಂಗಳು ವಿಷಯದಂತೆ ।
ಇನ್ನಿವಕೆ ದೃಶ್ಯತ್ವ ತೊಡಗಿತದರಂತೆ ॥ ೨೫ ॥

ಇದನರಿವ ಶಕ್ತಿಯುಂಟೇ ಬುದ್ಧಿಯಲ್ಲಿ ।
ಅದರಿಂದ ಬುದ್ಧಿ ದೃಕ್ಕಾಗುತಿಹುದಿಲ್ಲಿ ॥ ೨೬ ॥

ಆಂಧ್ಯವಾಯಿತು ನೇತ್ರವಿಂದು ಪಟುವಾಯ್ತು ।
ಮಾಂದ್ಯವಾಯಿತು ಎಂದಿನಂತೆ ಹಸನಾಯ್ತು ॥ ೨೭ ॥

ಎಂದು ಸಕಲೇಂದ್ರಿಯಂಗಳ ವಿಕಾರವನು ।
ಕುಂದಿಲ್ಲದೆಲ್ಲವನು ತಿಳಿಯುವದು ತಾನು ॥ ೨೮ ॥

ಇಂದ್ರಿಯಂಗಳ ವಿಕಾರವನೆಲ್ಲ ತಿಳಿದು ।
ಇಂದ್ರಿಯಂಗಳಿಗೆ ಬೇರಾಗಿ ತಾನುಳಿದು ॥ ೨೯ ॥

ಇಂದ್ರಿಯಾವಸ್ಥೆಗಳ ತಿಳಿಯುವದರಿಂದ ।
ಇಂದುಮುಖಿ ಬುದ್ಧಿ ದೃಕ್ಕಾಯಿತದರಿಂದ ॥ ೩೦ ॥

ದೃಶ್ಯಮಾದಿಂದ್ರಿಯಂಗಳ ಕಳೆಯಬೇಕು ।
ದೃಶ್ಯವಲ್ಲದ ಬುದ್ಧಿಯನು ಹಿಡಿಯಬೇಕು ॥ ೩೧ ॥

ಇಂದ್ರಿಯಂಗಳು ದೃಶ್ಯವೆನಿಸಿಕೆಟ್ಟಂತೆ ।
ಮುಂದೆ ಉಳಿಯದು ನೋಡು ಬುದ್ಧಿ ಇದರಂತೆ ॥ ೩೨ ॥

ರಾಗ ಮದ ಮೋಹ ಮತ್ಸರ ಭಾವದಿಂದ ।
ತ್ಯಾಗ ಲಜ್ಜಾ ಭೀತಿ ಭೇದಂಗಳಿಂದ ॥ ೩೩ ॥

ಭಿನ್ನಿಸುವದೀ ಬುದ್ಧಿ ಗುಣಭೇದದಿಂದ ।
ಇನ್ನಿದಕೆ ದೃಶ್ಯತ್ವವಾಯಿತದರಿಂದ ॥ ೩೪ ॥

ಬುದ್ಧಿ ತಾನಾಗದೇ ಅದಕನ್ಯವಾಗಿ ।
ಬುದ್ಧಿಯೊಳು ಸೇರಿ ಬುದ್ಧಿಗೆ ತೇಜವಾಗಿ ॥ ೩೫ ॥

ಬುದ್ಧಿಯ ವಿಕಾರವನು ಬುದ್ಧಿವೃತ್ತಿಯನು ।
ಬುದ್ಧಿಮಾಂದ್ಯವನು ಬುದ್ಧಿಯ ಕಾರ್ಯಗಳನು ॥ ೩೬ ॥

ಬೆಳಗಿಸುವವಲ್ಲಿ ಎಲ್ಲವನು ಬೇರೊಂದು ।
ತಿಳಿಯಬೇಕಿದನು ನೀ ಮೂಲದೃಕ್ಕೆಂದು ॥ ೮೭ ॥

ಇದು ಸರ್ವದೃಶ್ಯಕ್ಕೆ ಮೂಲದೃಕ್ಕಹುದು ।
ಇದರೊಳಗೆ ದೃಶ್ಯವೆಂಬುದು ಲಯಿಸುತಿಹುದು ॥ ೮೮ ॥

ಇದಕನ್ಯವಾಗಿ ಬೇರೊಂದು ದೃಕ್ಕಿಲ್ಲ ।
ಇದು ವಿಕಾರವ ಹೊಂದಿ ಭಿನ್ನಿಸುವದಿಲ್ಲ ॥ ೮೯ ॥

ಆದರಿಂದ ದೃಶ್ಯಭಾವಂಗಳಿದಕಿಲ್ಲ ।
ಇವನು ಮೀರಿದ ಪೂರ್ಣವಸ್ತು ಬೇರಿಲ್ಲ ॥ ೯೦ ॥

ಕಾಣುವೆನು ಎಂದರಿದು ಕಣ್ಗೆ ಕಾಣಿಸದು ।
ತಾನೆಂಬ ನಾಮದಿಂ ತನುವಿನೊಳಗಿಹುದು ॥ ೯೧ ॥

ತಾನೆಂಬ ತತ್ವವಿದು ಸಾಮಾನ್ಯವಲ್ಲ ।
ತಾನಿಲ್ಲದಿರೆ ಜಗಕೆ ಭಾವವೇ ಇಲ್ಲ ॥ ೯೨ ॥

ತಾನೆಂಬ ವಸ್ತುವೇ ತಿಳಿಯೆ ಪರಮಾತ್ಮ ।
ತಾನು ತನ್ನರಿಯದಿರಲಾಗಿ ಜೀವಾತ್ಮ ॥ ೯೩ ॥

ತನ್ನ ನಿಜತತ್ವವನು ತಾ ತಿಳಿಯಬೇಕು ।
ಜನ್ಮಜಾಡ್ಯಕ್ಕಲ್ಲಿ ಗವಧಿಯೆನಬೇಕು ॥ ೯೪ ॥

ತನ್ನ ತಿಳಿಯುವಮೇಲೆ ಕೆಡದು ಭವಬಾಧ ।
ನಿನ್ನೊಳಿಹ ಪ್ರೀತಿಯಿಂ ಪೇಳಿತಿದರಿಂದ ॥ ೯೫ ॥

ತನ್ನ ನಿಜವನು ಶೋಧಿಸುವ ರೀತಿಯನು ।
ಚನ್ನಾಗಿ ಮರಳಿ ತೋರುವೆನು ನೋಡವನು ॥ ೯೬ ॥

ನಾನೆಂಬ ಅಹಮೆಂಬ ತಾನು ಯೆಂಬುವದು ।
ಜ್ಞಾನದಿಂ ನೋಡಲೀ ಮೂರು ವಂದಹುದು ॥ ೯೭ ॥

ತಾನೆಂಬವಸ್ತು ಒಡಲೊಳಗೆ ಬೆಳಗುವದು ।
ತಾನಲ್ಲವನ್ಯವೇ ಇದು ಯೆನಿಸುತಿಹುದು ॥ ೯೮ ॥

ಇದು ಯೆನಿಸಿತೋರ್ಪುದೆಲ್ಲವು ದೃಶ್ಯರೂಪ ।
ಇದು ಯೆಂಬುವನು ತಿಳಿವ ತಾನೇ ದೃಗ್ರೂಪ ॥ ೯೯ ॥

ಇದುಯೆಂಬ ಭಾವಕೊಳಕಾಗುವದನೆಲ್ಲ ।
ಬೆದರದೆಯೆ ನೀಮುಂದೆ ಕಳೆಯಬೇಕೆಲ್ಲ || ೧೦೦ ||

ಇದು ಘಟವು ಇದು ಪಟವು ಇದು ಲೋಷ್ಟವೆಂದು
ಇದು ಮಠವು ಇದು ಕುಟಿಯು ಇದು ಕಾಷ್ಠವೆಂದು || ೧೦೧ ||

ಇದಮಿನೊಳು ಸೇರಿತೀ ಘಟಪಟಾದಿಗಳು ।
ಅದರಿಂದ ಲವಕಾಯ್ತು ಮಿಥ್ಯನಾಮಗಳು || ೧೦೨ ||

ಇದು ಗಗನವಿದು ಮರುತ ತೇಜವಾರಿಗಳು ।
ಇದು ಭೂಮಿಯುಂದಿಂತು ಪಂಚಭೂತಗಳು || ೧೦೩ ||

ಇದಮಿನೊಳು ಸೇರಿತದರಿಂದ ಮಿಥ್ಯೆಗಳು ।
ಇದನರಿವ ತನ್ನೊಳಿಲ್ಲವು ವಿಕಾರಗಳು || ೧೦೪ ||

ಇದುವೆ ಶಬ್ದಸ್ಪರ್ಶ ರೂಪಭೇದಗಳು ।
ಇದು ರಸವು ಗಂಧವೆಂದಿಂತು ವಿಷಯಗಳು || ೧೦೫ ||

ಇದಮಿನೊಳಗಾದವದರಿಂದ ಮಿಥ್ಯಗಳು ।
ಇವನರಿವ ತನಗಿಲ್ಲ ವಿದರ ಧರ್ಮಗಳು || ೧೦೬ ||

ಇದು ಭೂತವಿದು ಭವಿಷ್ಯದ್ವರ್ತಮಾನ ।
ಇದು ಪಕ್ಷವಿದು ಮಾಸವಿದು ಸೌರಮಾನ || ೧೦೭ ||

ಇದು ವರುಷವಿದು ಯುಗವು ಇದು ಕಲ್ಪವೆಂದು ।
ಇದಮಿನೊಳು ಸೇರಲೀ ಕಾಲಗತಿಬಂದು || ೧೦೮ ||

ಅದರಿಂದ ಸೇರಿತಿದರೊಳಗೆ ಮಿಥ್ಯತ್ವ ।
ಇದನರಿವ ತನ್ನೊಳುಂಟಾಯ್ತು ಸತ್ಯತ್ವ || ೧೦೯ ||

ವಿಧಿ ವಿಷ್ಣು ಶಿವರೆಂಬ ತತ್ವಂಗಳಲ್ಲಿ ।
ಹುದುಗಿಹುದು ಚೈತನ್ಯ ಜಡಗಳೆರಡಲ್ಲಿ || ೧೧೦ ||

ಇದುಯುಂದು ಜಡದೇಹ ಮಿಥ್ಯವಾಗುವದು ।
ಇದರೊಳಿಹ ಚೈತನ್ಯ ತಾನೆನಿಸುತಿಹುದು || ೧೧೧ ||

ಇದರಂತೆ ಬ್ರಹ್ಮಾಂಡ ಭಾಂಡ ಜಾಲಗಳು ।
ಇದಮಿನೊಳು ಸೇರಲೆನಿಸುವವು ಮಿಥ್ಯೆಗಳು || ೧೧೨ ||

ಇದರಂತೆ ಪಿಂಡಾಂಡವನು ತಿಳಿಯಬೇಕು ।
ಅದರೊಳಗೆ ಇದನುಂಶವನು ಕಳೆಯಬೇಕು ॥ ೧೧೩ ॥

ಇದು ದೇಹವೆನಲು ದೇಹವು ಮಿಥ್ಯವಾಯ್ತು ।
ಇದನರಿವ ತನ್ನ ತೇಜವು ಸತ್ಯವಾಯ್ತು ॥ ೧೧೪ ॥

ಇಂದ್ರಿಯಗಳಿವರಂತೆ ಇದು ಎನಿಸಿ ಮಿಥ್ಯೆ ।
ಇಂದ್ರಿಯಗಳಿವು ಎಂದು ತಾ ತಿಳಿವ ಸತ್ಯ ॥ ೧೧೫ ॥

ಇದು ಮನವು ಇದು ಹಮ್ಮು ಇದು ಬುದ್ಧಿಯೆಂದು ।
ಇದು ಚಿತ್ತವೆನಲೆಲ್ಲ ಇದನಿನೊಳು ಬಂದು ॥ ೧೧೬ ॥

ನಿಲ್ಲಲಿದುಯನಿಸಿ ಪುಸಿಯಹುದು ತುದಿಗೆಲ್ಲ ।
ಅಲ್ಲಿ ತಾನೆಂಬುದಿಹುದದಕೆ ಹತಿಯಿಲ್ಲ ॥ ೧೧೭ ॥

ಇದುಯಂಬುದೇ ಸೃಷ್ಟಿ ಅದು ಕಾರ್ಯವಾಯ್ತು ।
ಅದಕ್ಕೆ ಕಾರಣವಸ್ತು ತಾನೆಂಬುದಾಯ್ತು ॥ ೧೧೮ ॥

ತಾನೆಂಬುದಿಲ್ಲದಿರೆ ಇದು ಯಂಬುದಿಲ್ಲ ।
ತಾನಿರಲು ತನಗಿದಿರೆ ಇದನಾಯಿತೆಲ್ಲ ॥ ೧೧೯ ॥

ತನ್ನೊಳಹುದೀ ಜಗವ ಬೆಳಗಿಸುವದೀಪ ।
ತನ್ನ ತಿಳಿಯದೆ ಬಂದುದೀ ತ್ರಿವಿಧತಾಪ ॥ ೧೨೦ ॥

ಸಚ್ಚಿದಾನಂದ ನಿತ್ಯಾಖಂಡವೆಂದು ।
ನಿಶ್ಚೈಸು ನಿನ್ನ ರೂಪವನು ನೀನಿಂದು ॥ ೧೨೧ ॥

ಇದನು ತಿಳಿವಂತೆ ವಿವರಿಸಿ ಪೇಳ್ವೆ ನಾನು ।
ಸುದತಿ ನಿನ್ನೊಳು ನೋಡುತಿರಬೇಕು ನೀನು ॥ ೧೨೨ ॥

ಜಾಗರವು ಯಂಬುದಿಲ್ಲವು ಕನಸಿನಲ್ಲಿ ।
ಜಾಗರವ ಕಂಡ ತಾನಿಹ ಕನಸಿನಲ್ಲಿ ॥ ೧೨೩ ॥

ಬೆಳಗದೀಕನಸೆಂಬವಸ್ಥೆ ಜಾಗ್ರದಲಿ ।
ಪೊಳೆವ ಕನಸನು ಕಂಡ ತಾನಿರುವನಲ್ಲಿ ॥ ೧೨೪ ॥

ನೆನಸು ಕನಸುಗಳಿಲ್ಲ ವಾಸುಪ್ತಿಯಲ್ಲಿ ।
ಗಣಿಸಲವನರಿವ ತಾನಿಹಸುಪ್ತಿಯಲ್ಲಿ ॥ ೧೨೫ ॥

ಸುಷ್ಪ್ತಿಯೆಂಬುದು ಮೋಕ್ಷಪದವಿಯೊಳಗಿಲ್ಲ ।
ವ್ಯಾಪ್ತನಾಗಿರದೆ ತಾ ಮೋಕ್ಷವೇ ಯಿಲ್ಲ ॥ ೧೨೬ ॥
ನಿನ್ನೆಯೆಂಬುವದು ಯಿಂದಿನದಿನದೊಳಿಲ್ಲ ।
ನಿನ್ನೆಯನುಕಂಡ ತಾನಿಂದಿರುವನಲ್ಲ ॥ ೧೨೭ ॥
ಇಂದೆಂಬ ಕಾಲವಿಲ್ಲವು ನಾಳೆಯಲ್ಲಿ ।
ಇಂದಿರುವ ತಾನಿರುವ ನಾನಾಳೆಯಲ್ಲಿ ॥ ೧೨೮ ॥
ದಿನಪಕ್ಷಮಾಸ ವಂದರೊಳು ವಂದಿಲ್ಲ ।
ಗುಣಿಸುತಿದನೆಲ್ಲ ತಾನಿರುವನಕ್ಲೆಲ್ಲ ॥ ೧೨೯ ॥
ಪರಲೋಕವೆಂಬುದಿಲ್ಲೀ ಲೋಕದಲ್ಲಿ ।
ಪರದಿಂದಬಂದ ತಾನಿರುವನಿದರಲ್ಲಿ ॥ ೧೩೦ ॥
ಇಹಲೋಕವಿಲ್ಲ ವಾ ಪರಲೋಕದಲ್ಲಿ ।
ಇಹದಿಂದ ಪೋದ ತಾನಿರುವನದರಲ್ಲಿ ॥ ೧೩೧ ॥
ಕಳೆದತನು ತೋರದೀತನು ತೋರುವಲ್ಲಿ ।
ಕಳೆದು ತಾನದನು ನೆಲಸಿರುವನಿದರಲ್ಲಿ ॥ ೧೩೨ ॥
ಈ ದೇಹ ಜೆಂದುಪೋದರು ಕಾಣದಂತೆ ।
ಆ ದೇಹದೊಳಗಿರುವ ತಾನೆಂದಿನಂತೆ ॥ ೧೩೩ ॥
ಹಿಂದಿದ್ದ ಚಿತ್ರಗಳು ಯಿಂದಿನೊಳಗಿಲ್ಲ ।
ಇಂದಿರುವ ತಾನಿರದೆ ಚಿತ್ರಗಳೆಯಿಲ್ಲ ॥ ೧೩೪ ॥
ಇಂದಿನ ವಿಲಾಸಗಳು ಮುಂದಿನೊಳಗಿಲ್ಲ ।
ಮುಂದು ತಾನಿಲ್ಲದಿರೆ ನೋಡುವರೆಯಿಲ್ಲ ॥ ೧೩೫ ॥
ಅಜ್ಞಾನವೆಂಬುದಿಲ್ಲೀ ಜ್ಞಾನದಲ್ಲಿ ।
ವಿಜ್ಞಾನಿ ತಾನಿರುವ ನೀಜ್ಞಾನವಲ್ಲಿ ॥ ೧೩೬ ॥
ಜ್ಞಾನವೆಂಬುವದು ಅಜ್ಞಾನದೊಳಗಿಲ್ಲ ।
ಜ್ಞಾನವನು ಬಿಟ್ಟರಜ್ಞಾನಕೆಡೆಯಿಲ್ಲ ॥ ೧೩೭ ॥
ವರುಷ ಶತಮಾನ ಯುಗ ಮನ್ವಂತರಗಳು ।
ತರುಣಿ ಕೇಳೊಂದರೊಳಗೊಂದು ಭಿನ್ನಗಳು ॥ ೧೩೮ ॥

ವರುಷಯುಗ ಕಲ್ಪಮನ್ವಂತರಗಳನ್ನು ।
ಬೆರತು ತಾನಲ್ಲಿರುತ ಬಲ್ಲನೆಲ್ಲವನು ॥ ೧೩೯ ॥

ಆದೇಶವೆಂಬುದಿಲ್ಲೀ ದೇಶದಲ್ಲಿ ।
ಆದೇಶವನು ಕಂಡ ತಾನಿರುವನಿಲ್ಲಿ ॥ ೧೪೦ ॥

ಆ ವಸ್ತು ವೀವಸ್ತುವಿನಲಿ ನೋಡಿಲ್ಲ ।
ಆ ವಸ್ತು ವೀವಸ್ತು ತನ್ನ ಬಿಟ್ಟಿಲ್ಲ ॥ ೧೪೧ ॥

ಆ ಕಾಲವೆಂಬುದಿಲ್ಲೀ ಕಾಲದಲ್ಲಿ ।
ಈ ಕಾಲವಿಲ್ಲ ಮುಂದಿನ ಕಾಲದಲ್ಲಿ ॥ ೧೪೨ ॥

ಆ ಕಾಲ ವೀಕಾಲ ಮುಂದಿರುವ ಕಾಲ ।
ಸೋಕಿ ಬೆಳಗಲು ತನ್ನೊಳುಂಟಾಯ್ತು ಮೂಲ ॥ ೧೪೩ ॥

ಶಿವನ ಭಾವಿಸುವಲ್ಲಿ ವಿಷ್ಣು ವಿರಸಲ್ಲ ।
ಶಿವನ ಭಾವಿಸುವ ತಾನಿರದೆ ಶಿವನಿಲ್ಲ ॥ ೧೪೪ ॥

ವಿಷ್ಣು ಭಾವನೆಯಲ್ಲಿ ಶಿವನಪೆಸರಿಲ್ಲ ।
ವಿಷ್ಣು ಶಿವರಿಗೆ ಮೂಲತಾನಾದನಲ್ಲ ॥ ೧೪೫ ॥

ಇಂತು ಸೂಕ್ಷ್ಮಸ್ಥೂಲ ಕಾರಣಗಳಲ್ಲಿ ।
ನಿಂತಿಹುದು ತನ್ನ ಸತ್ಯವು ಬೆಳಗುತಲ್ಲಿ ॥ ೧೪೬ ॥

ಬೇರೆ ಮತ್ತೊಂದು ವಸ್ತುವು ತೋರುವಲ್ಲಿ ।
ನೀರೆ ತಾನದಕೆ ಮೊದಲಿರಲುಬೇಕಲ್ಲಿ ॥ ೧೪೭ ॥

ಅದರಿಂದ ತಾನಿಲ್ಲದಿಲ್ಲ ಬೇರೊಂದು ।
ಇದರಿಂದ ತಾನಾದಸದ್ರೂಪನೆಂದು ॥ ೧೪೮ ॥

ಇದುಯೆಂಬುದೇ ಶಾಂತೆ ಸದ್ರೂಪವಹುದು ।
ಇದು ತನ್ನ ಬಿಟ್ಟು ಬೇರೆಲ್ಲು ಕಾಣಿಸದು ॥ ೧೪೯ ॥

ಕನಸುನೆನಸು ಸುಸುಪ್ತಿಗಳು ಕೆಟ್ಟುಪೋಗಿ ।
ಗಣಿಸುತಿದನೆಲ್ಲ ತಾ ನಿಂತಿರುವನಾಗಿ ॥ ೧೫೦ ॥

ಕಾಲಕರ್ಮಗಳೆಲ್ಲ ಕಳೆಗೆಟ್ಟುಪೋಗಿ ।
ಕಾಲಕರ್ಮಗಳಲ್ಲಿ ತಾನಿರುವನಾಗಿ ॥ ೧೫೧ ॥

ಸುಖದುಃಖಗಳು ಪುಟ್ಟಿ ಪುಟ್ಟಿ ಲಯವಾಗಿ
ಸುಖದುಃಖಗಳಿಗಧಿಷ್ಠಾನ ತಾನಾಗಿ || ೧೫೨ ||

ಇಹಪರಂಗಳು ತೋರಿ ತೋರಿ ಲಯವಾಗಿ ।
ಇಹಪರಂಗಳು ತನ್ನ ಸಂಕಲ್ಪವಾಗಿ || ೧೫೩ ||

ನಾನಾ ಶರೀರಗಳು ತೊಡರಿ ಲಯವಾಗಿ ।
ನಾನಾ ಶರೀರಕಾಧಾರ ತಾನಾಗಿ || ೧೫೪ ||

ಬಹುರೂಪಗಳು ಕಣ್ಗೆ ತೋರಿ ಲಯವಾಗಿ ।
ಬಹುರೂಪ ಕಂಡು ತಾನಲ್ಲಿರುವನಾಗಿ || ೧೫೫ ||

ಶಬ್ದಜಾಲಗಳೆಷ್ಟೊ ಜನಿಸಿ ಲಯವಾಗಿ ।
ಶಬ್ದ ಬೆಳಗಲು ಮೂಲಬೀಜ ತಾನಾಗಿ || ೧೫೬ ||

ಸ್ಪರ್ಶಭೇದಗಳನಂತಗಳು ಲಯವಾಗಿ ।
ಸ್ಪರ್ಶವನು ಭೇದಿಸುವ ಬೇರು ತಾನಾಗಿ || ೧೫೭ ||

ರಸಗಂಧಜಾಲಗಳು ಜನಿಸಿ ಲಯವಾಗಿ ।
ರಸಗಂಧಗಳ ತಿಳಿವ ಮೂಲ ತಾನಾಗಿ || ೧೫೮ ||

ಸದ್ರೂಪಭಾವ ತನ್ನೊಳಗೆ ನೆಲೆಯಾಯ್ತು ।
ಸದ್ಭಿನ್ನವೆಲ್ಲ ಸತ್ತಲ್ಲವೆಂದಾಯ್ತು || ೧೫೯ ||

ಇಂತು ತಾನೆಂಬಾತ್ಮ ಸದ್ರೂಪನಾದ ।
ಕಾಂತೆ ಕೇಳಿದನರಿತವರ್ಮೇಲಿಲ್ಲ ಭೇದ || ೧೬೦ ||

ಸದ್ರೂಪನಾದವನೆ ಚಿದ್ರೂಪನಹನು ।
ಚಿದ್ರೂಪದಂದವನು ನೋಡು ತೋರುವೆನು || ೧೬೧ ||

ಬೆಳಗದೇ ತಾನಿಲ್ಲಿ ಬೇರೊಂದರಿಂದ ।
ಬೆಳಗಿಸುತ್ತೆಲ್ಲವನು ನಿಜರೂಪಿನಿಂದ || ೧೬೨ ||

ತನ್ನಿಂದ ತಾನೆ ಶೋಭಿಸುವ ವಸ್ತುವನು ।
ನಿನ್ನೊಳಗೆ ನೋಡು ಚಿತ್ತೈಸುತ ಸೀನದನು || ೧೬೩ ||

ಜಾಣೆ ಸದ್ವಸ್ತುವೇ ಚಿದ್ರೂಪವಹುದು ।
ಕಾಣುತೆಲ್ಲವನು ಬೆಳಗಿಸುತ ಬೆಳಗುವದು || ೧೬೪ ||

ದೇಹಾದಿಗಳು ತನ್ನ ಬೆಳಗಿಸುವವಲ್ಲ ।
ದೇಹ ತಾನಾಗದೇ ಬೆಳಗಿಸುವನೆಲ್ಲ ॥ ೧೬೫ ॥

ಕರಣೇಂದ್ರಿಯಂಗಳು ತನ್ನನು ತಿಳಿಯವಲ್ಲ ।
ಕರಣೇಂದ್ರಿಯಂಗಳ ಕುಣಿದಾಟ ತಾ ಬಲ್ಲ ॥ ೧೬೬ ॥

ವಿಧಿ ವಿಷ್ಣು ಶಿವರಾರು ತನ್ನ ಬೆಳಗಿಸರು ।
ವಿಧಿ ವಿಷ್ಣು ಶಿವರು ತನ್ನಿಂದ ಬೆಳಗುವರು ॥ ೧೬೭ ॥

ಸೂರ್ಯ ಚಂದ್ರಾಗ್ನಿಗಳು ತನ್ನ ಬೆಳಗಿಸವು ।
ಸೂರ್ಯಾದಿಗಳು ತಾನು ಸೇರಿ ಬೆಳಗುವುವು ॥ ೧೬೮ ॥

ಬ್ರಹ್ಮಾಂಡದೊಳಗೊಂದು ತನ್ನ ಬೆಳಗಿಸದು ।
ಬ್ರಹ್ಮಾಂಡಕೋಟಿ ತನ್ನಿಂದ ಬೆಳಗುವವು ॥ ೧೬೯ ॥

ಮೂರವಸ್ಥೆಗಳು ಬೆಳಗಿಸಲಿಲ್ಲ ತನ್ನ ।
ಮೂರವಸ್ಥೆಗಳ ಬೆಳಗಿಸುವ ತಾಮುನ್ನ ॥ ೧೭೦ ॥

ಬೆಳಗಿಸಿಕೊಳ್ಳುವವೆ ಜಡವಸ್ತುವಾಯ್ತು ।
ಬೆಳಗಿಸುವ ತನಗೆ ತದ್ಭಾವ ಮುಂಟಾಯ್ತು ॥ ೧೭೧ ॥

ಕನಸಿನೊಳು ತೋರುವ ಜಗತ್ತಿನೊಳಗೆಲ್ಲ ।
ಗಣಿಸಿ ನೋಡಿದರೆ ಬೇರೊಂದು ಬೆಳಕಿಲ್ಲ ॥ ೧೭೨ ॥

ಸೂರ್ಯ ಚಂದ್ರಾಗ್ನಿ ದೀಪಗಳ ಕಿಲೆಯಿಲ್ಲ ।
ಬೇರೆ ಬೆಳಗಿಸುವ ಬೆಳಕೆಂಬುದಿಲ್ಲ ॥ ೧೭೩ ॥

ಅದು ತನ್ನ ಬೆಳಕಿನಿಂ ಕೂಡಿ ಬೆಳಗುವದು ।
ಅದರಿಂದ ನೋಡು ಚಿದ್ರೂಪತಾನಹುದು ॥ ೧೭೪ ॥

ಯೆರಡು ಕಣ್ಗಳ ಮುಚ್ಚಿ ಮನವ ವಳಬೆರಸಿ ।
ಪರಿಪರಿಯ ನಾಮರೂಪಗಳನಾವರಿಸಿ ॥ ೧೭೫ ॥

ಕೂಡಿದರೆ ಅದು ಮನೋರಾಜ್ಯವೆನಿಸುವದು ।
ನೋಡು ನೀನದನು ಪಿಂಡಾಂಡವೆನಿಸುವುದು ॥ ೧೭೬ ॥

ಸೇರಿ ನೋಡಿದರೆ ಪಿಂಡಾಂಡ ಜಗವಲ್ಲಿ ।
ತೋರದೇ ಸೂರ್ಯಾದಿಗಳ ತೇಜವಲ್ಲಿ ॥ ೧೭೭ ॥

ಅದು ತನ್ನ ಬೆಳಕಿನಿಂ ಬೆಳಗುತ್ತಲಿಹುದು ।
ಅದರಿಂದ ನೋಡು ಚಿದ್ರೂಪತಾನಹುದು ॥ ೧೭೮ ॥

ಇದನೆ ಪೊಗಳುವದು ನೋಡೀ ಸಕಲವೇದ ।
ಇದನರಿತ ಪುಣ್ಯಪುರುಷನಲಿ ನಿರ್ವಿವಾದ ॥ ೧೭೯ ॥

ಆನಂದರೂಪ ತಾನೆಂಬ ನಿರ್ಣಯವ ।
ನಾನೀಗ ತೋರಿಸುವೆ ನೋಡದರಹದವ ॥ ೧೮೦ ॥

ಜಗದೊಳಗೆ ಧನವು ಎಲ್ಲಕ್ಕಿಂತ ಹಿತವು ।
ಮಗನು ಧನಕಿಂತ ಹಿತನೆನಿಪನಿದು ನಿಜವು ॥ ೧೮೧ ॥

ಮಗನಿಗಿಂತಲು ಪತ್ನಿಯೊಳಗಿಹುದು ಹಿತವು ।
ಬಗೆಯೆ ಸತಿಗಿಂತ ತನ್ನಂಗ ವತಿಹಿತವು ॥ ೧೮೨ ॥

ಅಂಗಗಳಿಗಿಂತ ಯಿಂದ್ರಿಯಗಳತಿಹಿತವು ।
ಮಂಗಳಾಂಗಿಯೆ ಬುದ್ಧಿಯದಕಿಂತ ಹಿತವು ॥ ೧೮೩ ॥

ಗಣಿಸೆ ತಾನಾಬುದ್ಧಿಗಿಂತ ಹಿತನಹದು ।
ತನಗಿಂತಲಧಿಕ ಹಿತವಸ್ತುವೇನಿಹುದು ॥ ೧೮೪ ॥

ಸಕಲ ಭೋಗಗಳ ತನಗಾಗಿ ಬಯಸುವನು ।
ಸಕಲ ವಸ್ತುಗಳಲ್ಲಿ ತಾನೆ ಹಿತವಹನು ॥ ೧೮೫ ॥

ತನ್ನ ಹಿತಕ್ಕಾಗಿ ಕಟ್ಟುವನು ತಾಮನೆಯ ।
ಮನೆಯ ಹಿತಕಾಗಿ ಕಟ್ಟನು ತಾನು ಮನೆಯ ॥ ೧೮೬ ॥

ತನ್ನ ಹಿತಕಾಗಿ ಸಂಪಾದಿಸುವ ಧನವ ।
ಧನದ ಹಿತಕಾಗಿ ತಾ ಪಿಡಿಯ ಧನವ ॥ ೧೮೭ ॥

ತನ್ನ ಹಿತಕಾಗಿ ಕೂಡುವ ವನಿತೆಯನ್ನು ।
ವನಿತೆ ಹಿತಕಾಗಿ ತಾ ಸೇರನವಳನ್ನು ॥ ೧೮೮ ॥

ತನ್ನ ಸುಖಕಾಗಿ ಸೇರುವಳು ಪತಿಯಲ್ಲಿ ।
ತನ್ನ ಸುಖವಿಾರಿದಡೆ ಸೇರಳವನಲ್ಲಿ ॥ ೧೮೯ ॥

ತನ್ನ ಸುಖಕಾಗಿ ಮಕ್ಕಳನು ಬಯಸುವನು ।
ತನ್ನ ಸುಖ ತಪ್ಪಿದರೆ ಮಗನೆ ಹಗೆಯಹನು ॥ ೧೯೦ ॥

ತನ್ನ ಹಿತಕಾಗಿ ಪುರಗಳನು ಸೇರುವನು ।
ತನ್ನ ಹಿತತಪ್ಪಿದರೆ ವನಕೆ ಪೋಗುವನು ॥ ೧೯೧ ॥

ತನಗೆ ಹಿತವಲ್ಲದಿರೆ ಧನವ ಬಿಸುಡುವನು ।
ತನಗೆ ಹಿತತೋರಿದೊಡೆ ವಿಷವ ಕುಡಿಯುವನು ॥ ೧೯೨ ॥

ತನಗೆ ಹಿತವಲ್ಲದಿಹ ಕನಕ ಕಸವಾಯ್ತು ।
ತನಗೆ ಹಿತವಾದೊಡೆ ಕಸ ಕನಕವಾಯ್ತು ॥ ೧೯೩ ॥

ತನ್ನ ಹಿತ ತೋರಿದೆಡೆಯೆಲ್ಲಿಹುದು ನಾಡು ।
ತನ್ನ ಹಿತವಿಲ್ಲದಿರೆ ನಾಡೆ ಸುಡುಗಾಡು ॥ ೧೯೪ ॥

ತನ್ನಂಗ ತನಿಗೆ ಹಿತತೋರದಿರಲವನು ।
ತನ್ನಂಗವನು ತಾನೆ ಕಡಿದು ಬಿಸುಡುವನು ॥ ೧೯೫ ॥

ತನ್ನ ಹಿತ ಕೊಡದಿರೆ ಕುಲವತೊರೆಯುವನು ।
ತನ್ನ ಹಿತವಿದ್ದ ಕುಲದೊಳಗೆ ಬೆರೆಯುವನು ॥ ೧೯೬ ॥
ತನ್ನ ಹಿತಕಾಗಿ ದೇವರನು ಭಜಿಸುವನು ।
ತನ್ನ ಹಿತ ತಪ್ಪೆ ದೇವರನು ಬಿಸುಡುವನು ॥ ೧೯೭ ॥
ತನ್ನ ಹಿತ ಬಿದ್ದ ಕಲ್ಲೆಲ್ಲ ನವರತ್ನ ।
ತನ್ನ ಹಿತವಿಲ್ಲದಾ ರತ್ನಗಳೆ ಕಲ್ಲು ॥ ೧೯೮ ॥
ತನ್ನ ಹಿತವಿರೆ ಮರದ ನೆರಳೆ ಮಾಳಿಗೆಯು ।
ತನ್ನ ಹಿತ ತಪ್ಪಿದೊಡೆ ಮಾಳಿಗೆಯು ಕೊಳೆಯು ॥ ೧೯೯ ॥
ತನ್ನ ಹಿತ ತೋರದಿರೆ ಹಣವೆ ಕಣವಾಯ್ತು ।
ತನ್ನ ಹಿತ ಕೂಡಲೀ ಕಣವೆ ಹಣವಾಯ್ತು ॥ ೨೦೦ ॥
ಇಂತು ತಾನೆಂದು ಪೇಳುವನೊಬ್ಬನಿರುವ ।
ಶಾಂತಿ ಕೇಳಾನಂದ ಶರಧಿಯೆನಿಸಿರುವ ॥ ೨೦೧ ॥
ಆನಂದ ತನ್ನೊಳಗೆ ತೋರುತಿರಲಾಗಿ ।
ಆನಂದರೂಪ ತಾನಾದನದಕಾಗಿ ॥ ೨೦೨ ॥
ಆನಂದ ಬೇರೆಲ್ಲು ತೋರದಿರಲಾಗಿ ।
ಆನಂದರೂಪ ತಾನಾದನದಕಾಗಿ ॥ ೨೦೩ ॥

ಆನಂದಕಾಗಿ ಯಲ್ಲವು ಕೂಡಿತಾಗಿ ।
ಆನಂದರೂಪ ತಾನಾದನದಕಾಗಿ ॥ ೨೦೪ ॥

ಎಲೆ ದೇವಿ ನೋಡಬೇಕಿದನು ನಿನ್ನೊಳಗೆ ।
ಥಳಥಳಿಸಿ ತುಂಬಿತುಳುಕುತ್ತಿಹುದ ಒಳಗೆ ॥ ೨೦೫ ॥

ಇದು ನಿಜಾನಂದವಿದಕಧಿಕವಿನ್ನಿಲ್ಲ ।
ಇದು ಸಿದ್ಧಿಸಿದೊಡೆ ವಿಷಯಗಳು ಬೇಕಿಲ್ಲ ॥ ೨೦೬ ॥

ನಿತ್ಯ ತಾನೆಂಬುವದ ನುಸುರಲಿನ್ನೇನು ।
ಸತ್ಯನೆಂದಾಗಲೇ ನಿತ್ಯನಲ್ಲೇನು ॥ ೨೦೭ ॥

ಆದೊಡೆ ಅನಿತ್ಯವಿದು ನಾಲ್ಕುತೆರನಾಯ್ತು ।
ಈ ಧರ್ಮವಿಲ್ಲದುದೆ ನಿತ್ಯವೆಂದಾಯ್ತು ॥ ೨೦೮ ॥

ಉದಯಕ್ಕೆ ಮೊದಲಿಲ್ಲದುದೆ ಪ್ರಾಗಭಾವ ।
ಉದಿಸಿ ಕೆಡಲದುವೆ ಪ್ರಧ್ವಂಸದ ಅಭಾವ ॥ ೨೦೯ ॥

ಅದು ಇದಲ್ಲೆಂಬುದನ್ಯೋನ್ಯದ ಅಭಾವ ।
ಉದಯವಿಲ್ಲದುದೆ ಅತ್ಯಂತದ ಅಭಾವ ॥ ೨೧೦ ॥

ಇಂತ ನಿತ್ಯದ ನಾಲ್ಕು ಧರ್ಮಂಗಳಲ್ಲಿ ।
ಭ್ರಾಂತಿ ಯಳಿದುಳಿವ ತಾನಿತ್ಯನಹನಲ್ಲಿ ॥ ೨೧೧ ॥

ಹುಟ್ಟದ್ದರೊಳ್ ಪ್ರಾಗಭಾವವಿರುತಿಹುದು ।
ಹುಟ್ಟದವತಾನಲ್ಲವಾಗಿ ಅದು ಇರದು ॥ ೨೧೨ ॥

ಕೆಡುವುದು ಪ್ರಧ್ವಂಸದಿಂದ ಕೂಡಿಹುದು ।
ಕೆಡುವ ತಾನಲ್ಲದಿರಲದು ಇಲ್ಲದಿಹುದು ॥ ೨೧೩ ॥

ಇದು ಅದಲ್ಲೆಂಬ ಬಗೆ ರೂಪಿನಿಂದಾಯ್ತು ।
ಇದು ತನ್ನೊಳಿಲ್ಲವದರಿಂದ ವಿಲ್ಲಾಯ್ತು ॥ ೨೧೪ ॥

ಎಂದಿಗೂಯಿಲ್ಲನೆಂಬುವ ಅಭಾವವಿದು ।
ನಂಧ್ಯಾ ತನುಜ ಶಶಶೃಂಗವೊಳಗಿಹುದು ॥ ೨೧೫ ॥

ಎಂದಿಗೂ ತಾನಿರುವನಾಗಿ ಇವರೊಳಗೆ ।
ಹೊಂದದತ್ಯಂತದ ಅಭಾವ ತನ್ನೊಳಗೆ ॥ ೨೧೬ ॥

ಭಾವವೆನಿಸುವ ವಸ್ತು ನಿತ್ಯವೆನಿಸುವದು ।
ಭಾವವಿಲ್ಲದ ಬದುಕ ನಿತ್ಯವಾಗುವದು ॥ ೨೧೭ ॥

ಭಾವವೆಂಬುದು ತನ್ನ ಬಿಟ್ಟು ಬೇರಿಲ್ಲ ।
ಭಾವಿಸಲು ನಿತತ್ವ ತನ್ನೊಳಾಯ್ತಲ್ಲ ॥ ೨೧೮ ॥

ಪರಿಪೂರ್ಣತನವ ತೋರುವೆ ಮುಂದೆ ನಾನು ।
ಕರಣವೃತ್ತಿಯಲಿ ಕೂಡಿರಬೇಕು ನೀನು ॥ ೨೧೯ ॥

ಇಂದ್ರಿಯ ದ್ವಾರದಿಂ ಹೊರಟು ಬಾಹ್ಯದಲಿ ।
ನಿಂದು ತಾನೇ ಕರಣ ವೃತ್ತಿಗತಿಗಳಲಿ ॥ ೨೨೦ ॥

ಮುಂದಿರುವ ಘಟಪಟಾದಿಗಳ ರೂಪವನು ।
ಹೊಂದಿ ಬೆಳಗಿಸುವನೀ ದೃಶ್ಯಜಾಲವನು ॥ ೨೨೧ ॥

ಅದರೊಳಗೆ ರೂಪುನಾಮಗಳಾಯ್ತು ಕರಣ ।
ಅದನು ಬೆಳಗಿಸುವ ತಾನಾದನಧಿಕರಣ ॥ ೨೨೨ ॥

ಬುದ್ಧಿಯಿಲ್ಲದೆ ರೂಪುನಾಮಂಗಳಿಲ್ಲ ।
ಬುದ್ಧಿ ಎಂಬುದು ತನ್ನ ಬಿಟ್ಟು ಬೇರಿಲ್ಲ ॥ ೨೨೩ ॥

ಚಿತ್ತವನು ಬಿಟ್ಟು ಬೇರಿಲ್ಲ ವಿಸ್ಮರಣೆ ।
ಚಿತ್ತವೆಂಬುವ ಸತಿಯೆ ತನ್ನ ಸದಶರಣೆ ॥ ೨೨೪ ॥

ಹಮ್ಮು ಬಿದ್ದೆಡೆಯೆಲ್ಲಿ ಭೇದ ಬೆಳಗುವದು ।
ಹಮ್ಮು ತನ್ನರಿತಮೇಲೆಲ್ಲಿ ನಿಲ್ಲುವದು ॥ ೨೨೫ ॥

ಮನಸೇರಿದೆಡೆಯಲ್ಲಿ ಬಳಗ ಬೆಳಗುವದು ।
ಮನನಡಗುವೆಡೆಯೊಳಗಿವೆಲ್ಲ ಮುಳುಗುವವು ॥ ೨೨೬ ॥

ಕರಣವೃತ್ತಿಗಳೆ ಈ ಬ್ರಹ್ಮಾಂಡವಾಯ್ತು ।
ಕರಣವಡಗಿದ ಕಾರಣದೊಳು ಲಯವಾಯ್ತು ॥ ೨೨೭ ॥

ವೃತ್ತಿ ಬೆಳಗುವ ಪಕ್ಷದಲ್ಲಿ ಜಗವಿಹುದು ।
ವೃತ್ತಿಯಿಲ್ಲದ ಪಕ್ಷಕೆಲ್ಲಿ ಜಗವಿಹುದು ॥ ೨೨೮ ॥

ಕರಣಗಳ ಚಲನೆಯೇ ವೃತ್ತಿಯೆನಿಸುವದು ।
ಕರಣವಿದು ತನ್ನೊಳಗೆ ತೋರುತಡಗುವದು ॥ ೨೨೯ ॥

ಇದರಿಂದ ಜಗವು ತನ್ನೊಳಗೆ ಲಯವಹುದು ।
ಇದರ ಅನುಭವವು ಸುಪ್ತಿಯೊಳು ತಿಳಿಯುವದು ॥ ೨೩೦ ॥

ಪರಿಕಿಸಲು ಸುಪ್ತಿಯಲಿ ಜಗದ ಮಾತಿಲ್ಲ ।
ಕರಣವೃತ್ತಿಯು ತೋರಿದಲ್ಲಿ ಬಂತೆಲ್ಲ ॥ ೨೩೧ ॥

ಅಸಮಾನ ನೋಡು ತಾನೆಂಬ ಕಾರಣನು ।
ಬಸುರೊಳಗೆ ಬ್ರಹ್ಮಾಂಡ ಕೋಟಿ ಧರಿಸಿಹನು ॥ ೨೩೨ ॥

ವೃತ್ತಿಗೆಳೆಯುವ ರೂಪವೆಂದಾಯಿತೆನಲು ।
ಚಿತ್ತವೇ ತೋರಿತಂತಿದು ತನ್ನ ಕವಲು ॥ ೨೩೩ ॥

ತಾನು ತನ್ನರಿಯದಿಹ ಮರವೆಯೇ ಬಂದು ।
ಕಾಣುವದು ಇದನೆಂಬ ನಾಮದಿಂ ನಿಂದು ॥ ೨೩೪ ॥

ಪರಿಪೂರ್ಣನಿಗೆ ಮರವೆಯಂತೆನಲು ಕೇಳು ।
ಪರಿಪೂರ್ಣ ನೀನು ಮೊದಲೆಂತಿದ್ದೆ ಪೇಳು ॥ ೨೩೫ ॥

ಸಂಶಯಾತ್ಮರ ದುರಾಕ್ಷೇಪವಿದು ಕಾಂತೆ ।
ಸಂಶಯಾತ್ಮರಿಗೆ ತಪ್ಪದು ಜನ್ಮ ಚಿಂತೆ ॥ ೨೩೬ ॥

ಸಾಕು ಬಿಡು ಸಂಶಯಾತ್ಮರಿಗೆ ಸುಖವಿಲ್ಲ ।
ಲೋಕವಡಗಿದಮೇಲೆ ದುಃಖನಮಗಿಲ್ಲ ॥ ೨೩೭ ॥

ಲೋಕವಡಗಿದೊಡೆ ಜಗವಾನಂದವಾಯ್ತು ।
ದೇಹವಿದ್ದರು ನೋಡಲಿಲ್ಲದಂತಾಯ್ತು ॥ ೨೩೮ ॥

ಇದು ಪರಮಪದ ವಿದಕ್ಕಧಿಕವಿನ್ನಿಲ್ಲ ।
ಇದನರಿತ ಪುರುಷನಿಗೆ ಮರಣಭಯವಿಲ್ಲ ॥ ೨೩೯ ॥

ತಾನೆಂಬ ನಿನ್ನ ರೂಪಿನಲಿ ನೀ ಕೂಡು ।
ನೀನಲ್ಲದಿಹ ಹನುವ ಬೇರಿಟ್ಟು ನೋಡು ॥ ೨೪೦ ॥

ಗಂಡಲ್ಲ ಹೆಣ್ಣಲ್ಲ ಷಂಡನೀನಲ್ಲ ।
ಖಂಡವಾದೀದೇಹ ಧರ್ಮ ನಿನದಲ್ಲ ॥ ೨೪೧ ॥

ಯಲ್ಲರೂಪಿನೊಳು ನೀನಿಂಬಿಲ್ಲದಿರುವೆ ।
ಯಲ್ಲ ಶಬ್ದದಲಿ ನೀ ತುಂಬಿಕೊಂಡಿರುವೆ ॥ ೨೪೨ ॥

ಏನೊಂದು ತೋರದಾನಂದ ಕಡಲಲ್ಲಿ ।
ನಾನೆಂಬ ನಾಮದಿಂದಿರುವೆ ನೀನಲ್ಲಿ ॥ ೨೪೩ ॥

ಪರಮಾರ್ಥರೂಪ ನೋಡಿದು ನಿನ್ನದೆಂದು ।
ಗುರುನಾಥ ಪೇಳಲಾ ಸ್ಥಳದಲ್ಲಿ ನಿಂದು ॥ ೨೪೪ ॥

ಆನಂದವುದದಿಂದ ಮೈಮರೆಯಲಾಗ ।
ಧ್ಯಾನದಿಂ ಬಳಿಕ ಚೇತರಿಸಿ ತಾ ಬೇಗ ॥ ೨೪೫ ॥

ಬೇಡಿದಳು ಪರಮಪಾವನಮೂರ್ತಿಯನ್ನು ।
ಪಾಡಿದಳು ಮನಕೆ ಬಂದಂತೆ ನುತಿಯನ್ನು ॥ ೨೪೬ ॥

ಪ್ರಾಣನಾಥನೆ ನಿನ್ನ ಪಾದವನು ಕಂಡ ।
ಮಾನವನು ಮೃತ್ಯುದೇವತೆಗೆ ತಾ ಗಂಡ ॥ ೨೪೭ ॥

ದೇಶಿಕೋತ್ತಮ ನಿನ್ನ ಗಾಳಿ ಬೀಸಿದರೆ ।
ನಾಶವೆಂಬೀ ತುಚ್ಛವಾರ್ತೆಗಳು ಕುಸಿವೆ ॥ ೨೪೮ ॥

ಗುರುಕುಮೇಶ್ವರ ನಿನ್ನ ಭಜಿಸಿದವನೀಗ ।
ಸ್ಥಿರವಾದ ಸುಖಸುಧೆಯು ಭಜಿಸುವನು ಬೇಗ ॥ ೨೪೯ ॥

ಏನೆಂದು ಪೇಳಲೀ ಯಾನಂದವನ ।
ತಾನೆ ತಾನಾಗಿ ತುಳುಕುವ ತನ್ನಲದವ ॥ ೨೫೦ ॥

ದುರ್ಮಾಂಸದಂತೆ ಬೆಳೆದಿರುವ ಕಾಮುಗಳು ।
ನಿರ್ಮೂಲವಾದ ವದರೊಡನೆ ನಾಮಗಳು ॥ ೨೫೧ ॥

ನಿನ್ನ ಪಾದದಮೇಲೆ ಮನ ಮುಳುಗಿದಾಗ ।
ಭಿನ್ನ ಕರ್ಮವು ನಡುಗಿ ಬೆರಗಾದುದಾಗ ॥ ೨೫೨ ॥

ನಿನ್ನ ವಚನಾಮೃತಕ್ಕೆ ಕಿವಿಯೊಲಿಗಿದಾಗ ।
ಪುಣ್ಯ ಪಾಪಗಳು ಕರಗಿದವು ತಾನಾಗ ॥ ೨೫೩ ॥

ನಿನ್ನ ಮನದೊಳಗೆನ್ನ ಮನವು ಬೆರೆತಾಗ ।
ಜನನ ಮರಣದ ಮಾತು ಬಿಟ್ಟೋಡಿತಾಗ ॥ ೨೫೪ ॥

ನಿನ್ನೊಡನೆ ಯನಗೆ ಸಮರಸ ತೋರಿದಾಗ ।
ಭಿನ್ನವೆಂಬುದು ಪೋಗಿ ಒಂದಾಯಿತಾಗ ॥ ೨೫೫ ॥

ಪರವೆಂಬುದಿಲ್ಲ ದುಳಿದಿರುವೆ ನಾನೀಗ ।
ಗುರುವೆ ನಿನ್ನೊಳಗಿಹುದು ನೋಡಲಿಲ್ಲೀಗ ॥ ೨೫೬ ॥
ತನ್ನ ತಾ ತಿಳಿದಮೇಲಿನ್ನೆಲ್ಲಿ ಯೋಗ ।
ಭಿನ್ನವೆಂಬುದು ಪೋದಮೇಲೆ ತಾ ಮೂಗ ॥ ೨೫೭ ॥
ಪತಿಗಳೊಳು ನಿನ್ನ ಸಮಸಾದ ಪತಿಯಿಲ್ಲ ।
ಸತಿಯರೊಳು ನಿನ್ನ ಸಮನಾದ ಸತಿಯಿಲ್ಲ ॥ ೨೫೮ ॥
ಹಮ್ಮಳಿವಿತನಕ ಸುಖಶಲೆಯೆಂಬುದಿಲ್ಲ ।
ನಮ್ಮಿಬ್ಬರನು ಕಂಡ ಧೀರನಿದಬಲ್ಲ ॥ ೨೫೯ ॥
ದೇವಸರ್ವಸ್ವನಿದು ನಿನ್ನ ವಶವಾಯ್ತು ।
ಭಾವವಸ್ತುವೆ ಬೆಳೆದು ಪೂರ್ಣ ಸುಖವಾಯ್ತು ॥ ೨೬೦ ॥
ಯೆಂದು ಮೌನಾನಂದ ಮಂದಿರಕೆ ಪೋಗಿ ।
ನಿಂದಳಾರು ಶಂಕರನೊಳೆರಕವಾಗಿ ॥ ೨೬೧ ॥
ಇದು ಶಿವಾನಂದ ಶಿವರಾಮ ವಿರಚಿತವು ।
ಇದರರ್ಥವನು ತಿಳಿದೊಡೀ ಜನ್ಮಹಿತವು ॥ ೨೬೨ ॥
ಇದು ತನ್ನ ನಿಜರೂಪವನು ತೋರಿಸುವದು ।
ಇದು ತಾನೆ ತನಗೆ ಸೌಭಾಗ್ಯವೆನಿಸುವುದು ॥ ೨೬೩ ॥
ಇದರೊಳಗೆ ತನ್ನ ಸುಖವನು ನೋಡಿದವನು ।
ಹೃದಯದೊಳು ನೋಡುವನು ಭುವನಕೋಟಿಯನು ॥ ೨೬೪ ॥
ಇದನು ತಿಳಿಯುವದು ನಿತ್ಯಾನಂದಕಾಗಿ ।
ಇದಕೊಡೆಯ ಗುರುಶಂಕರಾನಂದಯೋಗಿ ॥ ೨೬೫ ॥
ಪರಮಾರ್ಥಸಾರದರ್ಥವನು ತಿಳಿದವನು ।
ಗುರುಶಂಕರಾರ್ಯನೊಳಗೆರಕನಾಗುವನು ॥ ೨೬೬ ॥

ಇತಿ ಶ್ರೀ ಮದಧ್ಯಾತ್ಮ ವಿದ್ಯಾಮೂರ್ತಿ ಜನನಮರಣ ಹರಣ ಪ್ರವೀಣ ಕೀರ್ತಿ
ಶ್ರೀಮದ್ಗುರು ಶಂಕರ ಚರಣಕಮಲ ಪರಾಗ ಭೂಸುರ ಪಾಲ
ಶಿವರಾಮನಾಮಕ ಶಂಕರದಾಸ ವಿರಚಿತ ಪರಮಾರ್ಥಸಾರ
೨೬೬ ಕ್ಕೆ ಸಂಪೂರ್ಣವು.

॥ ಮಂಗಳಂ ॥

|| ಓಂ ||

ಶ್ರೀ ಶಿವಪಂಚಾಕ್ಷರೀ ಸ್ತೋತ್ರ

ನಾಗೇಂದ್ರ ಹಾರಾಯ ತ್ರಿಲೋಚನಾಯ
ಭಸ್ಮಾಂಗರಾಗಾಯ ಮಹೇಶ್ವರಾಯ ||
ನಿತ್ಯಾಯ ಶುದ್ಧಾಯ ದಿಗಂಬರಾಯ ।
ತಸ್ಮೈ ನಕಾರಾಯ ನಮಃಶಿವಾಯ || || ೧ ||

ಮಂದಾಕಿನೀ ಸಲಿಲಚಂದನ ಚರ್ಚಿತಾಯ ।
ನಂದೀಶ್ವರ ಪ್ರಮಥನಾಥ ಮಹೇಶ್ವರಾಯ ||
ಮಂದಾರಪುಷ್ಪ ಬಹುಪುಷ್ಪ ಸುಪೂಜಿತಾಯ ।
ತಸ್ಮೈ ಮಕಾರಾಯ ನಮಃಶಿವಾಯ || ೨ ||

ಶಿವಾಯ ಗೌರೀವದನಾಬ್ಜ ವೃಂದ ।
ಸೂರ್ಯಾಯ ದಕ್ಷಾಧ್ವರನಾಶಕಾಯ ||
ಶ್ರೀ ನೀಲಕಂಠಾಯ ವೃಷಧ್ವಜಾಯ ।
ತಸ್ಮೈ ಶಿಕಾರಾಯ ನಮಃಶಿವಾಯ || ೩ ||

ವಸಿಷ್ಠ ಕುಂಭೋದ್ಭವ ಗೌತಮಾರ್ಯ ।
ಮುನೀಂದ್ರ ದೇವಾರ್ಚಿತ ಶೇಖರಾಯ ||
ಚಂದ್ರಾರ್ಕ ವೈಶ್ವಾನರ ಲೋಚನಾಯ ।
ತಸ್ಮೈ ವಕಾರಾಯ ನಮಃಶಿವಾಯ || ೪ ||

ಯಕ್ಷಸ್ವರೂಪಾಯ ಜಟಾಧರಾಯ ।
ಪಿನಾಕಹಸ್ತಾಯ ಸನಾತನಾಯ ||
ದಿವ್ಯಾಯ ದೇವಾಯ ದಿಗಂಬರಾಯ ।
ತಸ್ಮೈ ಯಕಾರಾಯ ನಮಃಶಿವಾಯ || ೫ ||

ಪಂಚಾಕ್ಷರಮಿದಂ ಪುಣ್ಯಂ । ಯಃ ಪಠೇಚ್ಛಿವ ಸನ್ನಿಧೌ ||
ಶಿವಲೋಕ ಮವಾಪ್ನೋತಿ । ಶಿವೇನ ಸಹಮೋದತೇ || ೬ ||

ಇತಿ ಶ್ರೀ ಮಚ್ಛಂಕರಾಚಾರ್ಯ ವಿರಚಿತಂ
ಶಿವಪಂಚಾಕ್ಷರೀ ಸ್ತೋತ್ರಂ ಸಂಪೂರ್ಣಂ

ಶ್ರೀ ಪಂಚಾಕ್ಷರೀ ಸ್ತೋತ್ರದ

ಅರ್ಥ

ವಾಸುಕಿ ಎಂಬ ಸರ್ಪವನ್ನು ಹಾರವಾಗಿ ಧರಿಸಿರುವ, ಮೂರು ಕಣ್ಣುಗಳುಳ್ಳ, ಭಸ್ಮಲೇಪನಮಾಡಿಕೊಂಡಿರುವ, ಎಲ್ಲಕ್ಕಿಂತಲೂ ಮೇಲಾದ ಒಡೆಯನಾಗಿರುವ, ನಾಶವಿಲ್ಲದೆ ನಿತ್ಯನಾಗಿಯೂ, ಪರಿಶುದ್ಧನಾಗಿಯೂ, ನಿರ್ಲಿಪ್ತನಾಗಿಯೂ ದಿಗಂಬರನಾಗಿಯೂ ಇರುವ ನಕಾರವಾಚ್ಯನಾದ ಪರಶಿವನಿಗೆ ನಮಸ್ಕಾರ. ॥ ೧॥

ಗಂಗಾನದಿಯ ನೀರಿನಿಂದ ತೇದು, ತೆಗೆದ, ಗಂಧವನ್ನು ಲೇಪಿಸಿಕೊಂಡಿರುವ, ಪ್ರಮಥಗಣಂಗಳಿಗೆ ಅಧಿಪತಿಯಾಗಿರುವ, ಮಂದಾರ ಕುಸುಮ ಮತ್ತು ಅನೇಕ ಬಗೆಯ ಹೂವುಗಳಿಂದ ಪೂಜಿಸಲ್ಪಡುತ್ತಿರುವ, ಸುಕಾರವಾಚ್ಯನಾದ ಪರಮೇಶ್ವರನಿಗೆ ನಮಸ್ಕಾರ. ॥ ೨ ॥

ಗೌರೀದೇವಿಯ ಮುಖಕಮಲಕ್ಕೆ ಸೂರ್ಯನಂತಿರುವ, ದಕ್ಷನ ಯಾಗವನ್ನು ಧ್ವಂಸಮಾಡಿದ, ವಿಷವನ್ನು ಕಂಠದಲ್ಲಿ ಧರಿಸಿರುವ, ವೃಷಭವೇಧ್ವಜದಲ್ಲಿ ಗುರುತಾಗಿವುಳ್ಳ, ಶಿಕಾರವಾಚ್ಯನಾದ ಶಂಕರನಿಗೆ ನಮಸ್ಕಾರ. ॥ ೩ ॥

ವಶಿಷ್ಠರು, ಅಗಸ್ತ್ಯರು, ಗೌತಮಋಷಿಗಳೇ ಮುಂತಾದ ಮುನಿಶ್ರೇಷ್ಠರಿಂದಲೂ, ಇಂದ್ರಾದಿ ದೇವತೆಗಳಿಂದಲೂ ಪೂಜಿಸಲ್ಪಡುತ್ತಿರುವ, ಚಂದ್ರ, ಸೂರ್ಯ, ಅಗ್ನಿ ಎಂಬ ಮೂರು ಕಣ್ಣುಗಳುಳ್ಳ ವಕಾರ ಪ್ರಣವವಾಚ್ಯನಾದ ಗೌರೀಶನಿಗೆ ನಮಸ್ಕಾರ. ॥ ೪ ॥

ಯಕ್ಷಸ್ವರೂಪನೂ, ಜಟಾಧಾರಿಯೂ, ಪಿನಾಕವೆಂಬ ಧನುಸ್ಸನ್ನು ಕೈಯಲ್ಲಿ ಧರಿಸಿರುವವನೂ, ಸನಾತನನೂ, ದಿವ್ಯನೂ, ದಿಗಂಬರನೂ ಆದ, ಯಕಾರವಾಚ್ಯನಾದ ಸದಾಶಿವನಿಗೆ ನಮಸ್ಕಾರ. ॥ ೫ ॥

ನಮಃಶಿವಾಯ ಎಂಬ ಐದು ಅಕ್ಷರಗಳಿಂದ ಕೂಡಿದ, ಪುಣ್ಯಕರವಾದ ಈ ಶಿವಪಂಚಾಕ್ಷರೀ ಮಂತ್ರವನ್ನು ಜಪಿಸುವ ಉಪಾಸಕನು ಶಿವಲೋಕವನ್ನು ಹೊಂದಿ ಶಿವನೊಡನೆ ಪರಮ ಸುಖವನ್ನು ಅನುಭವಿಸುತ್ತಾನೆ.

ಶಿವಪಂಚಾಕ್ಷರೀ ಸ್ತೋತ್ರದ ಅರ್ಥ ಸಂಪೂರ್ಣಂ

ವೇದಾಂತ ಶಿವರಾಮ ಶಾಸ್ತ್ರಿಗಳವರಿಂದ ರಚಿತವಾದ
ವೇದಾಂತ ಗ್ರಂಥಗಳು

ಶಂಕರಾನಂದ ತತ್ವ	0=80
ಶಂಕರಾನಂದ ಪದ್ಧತಿ	0=80
ಶಂಕರಬೋಧಾಮೃತ	0=50
ವೇದಾಂತ ಜ್ಞಾನ ರತ್ನಪ್ರಭಾ	0=80
ಸನ್ಯಾಸಿ ಲಕ್ಷಣ	0=75
ಬ್ರಹ್ಮಾನಂದ ಬೋಧೆ	1=00
ಮುಕ್ತಿಮಾರ್ಗ ಪ್ರದೀಪಿಕೆ	1=25
ಶಂಕರಾನಂದ ಕೆಂಪ	0=40

ಪ್ರಕಾಶಕರು:

ಎಂ. ಗೋಪಾಲಶೆಟ್ಟಿ ಸನ್ಸ್,

ಶ್ರೀ ಶಂಕರಾನಂದ ಬುಕ್ ಡಿಪೋ

" ಶಾಂತಿನಿವಾಸ್ "

೬ ನೇ ಕ್ರಾಸ್, ಹೊಸಕೇರಿ, ಮೈಸೂರು-೪